# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 854
2. ಸದಸ್ಯರ ಹೆಸರು : ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)
3. ಉತ್ತರಿಸಬೇಕಾದ ದಿನಾಂಕ : 18-12-2018
4. ಉತ್ತರಿಸುವ ಸಚಿವರು : ಮಾನ್ಯ ಜಲ ಸಂಪನ್ಮೂಲ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಕೊಳ್ಳೇಗಾಲ ತಾಲ್ಲೂಕು ಗುಂಡಾಲ್ ಜಲಾಶಯದ ಹಿಂದೆ ಉದ್ಯಾನವನವನ್ನು ಅಭಿವೃದ್ಧಿಪಡಿಸಿ ಪ್ರವಾಸಿ ತಾಣವನ್ನಾಗಿ ಮಾಡುವ ಯೋಜನೆ ಯಾವ ಹಂತದಲ್ಲಿದೆ; | ಗುಂಡಾಲ್ ಜಲಾಶಯದಲ್ಲಿ ಉದ್ಯಾನವನ ನಿರ್ಮಾಣ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದ್ದು, ಪ್ರಸ್ತುತ ಈ ಕೆಳಕಂಡ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆ :<br>1. ಲ್ಯಾಂಡ್‌ಸ್ಕೇಪಿಂಗ್‌ನ ಮಣ್ಣು ಅಗೆತದ ಕಾಮಗಾರಿ<br>2. ಕೆಂಪು ಮಣ್ಣಿನ ಕೇಸಿಂಗ್<br>3. ಫಾರ್ಮ್ ಯಾರ್ಡ್‌ಗಾಗಿ ಗೊಬ್ಬರ<br>4. ಚೈನ್ ಲಿಂಕ್ ಫೆನ್ಸಿಂಗ್<br>5. ಪಾತ್‌ವೇ, ಪಿವಿಸಿ ಪೈಪ್ ಲೈನಿಂಗ್, ಪಂಪ್ ಮೋಟಾರಿನೊಂದಿಗೆ ಸ್ಪ್ರಿಂಕ್ಲರ್ ಅಳವಡಿಸುವುದು<br>6. ವಿದ್ಯುತ್ತೀಕರಣದ ವ್ಯವಸ್ಥೆ<br>7. ಪರ್‌ಗೋಲಾ ಮತ್ತು ಮೌಲ್ಡ್ ಬೆಂಚುಗಳು<br>ಉದ್ಯಾನವನಕ್ಕೆ ಗೇಟ್‌ಗಳನ್ನು ಅಳವಡಿಸುವ ಕೆಲಸವು ಮಾತ್ರ ಬಾಕಿ ಇರುತ್ತದೆ. |
| ಆ | ಈ ಜಲಾಶಯದ ಬಳಿ ಇರುವ ನೀರಾವರಿ ಇಲಾಖೆಯ ಅತಿಥಿಗೃಹ ಮತ್ತು ಜಲಾಶಯದ ಪ್ರದೇಶದಲ್ಲಿ ಕುಡುಕರ ಹಾವಳಿ ಹೆಚ್ಚಾಗಿದ್ದು, ಜಲಾಶಯ ವೀಕ್ಷಣೆಗೆ ಬರುವ ಪ್ರವಾಸಿಗಳಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಉದ್ಯಾನವನವನ್ನು ನೋಡಿಕೊಳ್ಳಲು ಕಾವಲುಗಾರರನ್ನು ನೇಮಿಸಲಾಗಿದೆ. ಗುಂಡಾಲ್ ಜಲಾಶಯದ ಬಳಿ ಇರುವ ನೀರಾವರಿ ಇಲಾಖೆಯ ಅತಿಥಿಗೃಹ ಮತ್ತು ಜಲಾಶಯದ ಪ್ರದೇಶದಲ್ಲಿ ವೀಕ್ಷಣೆಗೆ ಬರುವ ಪ್ರವಾಸಿಗಳಿಂದ ಈವರೆವಿಗೂ ಯಾವುದೇ ದೂರು ಬಂದಿರುವುದಿಲ್ಲ. ಜಲಾಶಯದ ನಿರ್ವಹಣೆಗಾಗಿ ಕಾವಲುಗಾರರು ಕಾರ್ಯ ನಿರ್ವಹಿಸುತ್ತಿದ್ದು, ಜಲಾಶಯದ ಪ್ರದೇಶದಲ್ಲಿ ಪೊಲೀಸ್ ಕಾವಲು ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು. |
| ಇ | ಜಲಾಶಯದ ಪ್ರದೇಶವನ್ನು ಸೂಕ್ತವಾಗಿ ನಿರ್ವಹಣೆ ಮಾಡಿ, ಕಾವಲುಗಾರರನ್ನು ನೇಮಿಸಿ, ಪ್ರವಾಸಿಗರು ಬರುವ ರಜಾ ದಿನಗಳಲ್ಲಿ ಪೊಲೀಸ್, ಪಿಕೆಟಿಂಗ್ ವ್ಯವಸ್ಥೆ ಮಾಡಿ ಅನೈತಿಕ ಚಟುವಟಿಕೆ ನಡೆಸುವವರನ್ನು ಹೊರಹಾಕಲು ಕ್ರಮ ಜರುಗಿಸಲಾಗುವುದೇ? | |

*ಸಂಖ್ಯೆ:ಜಸಂಇ 77 ಎನ್‌ಎಲ್‌ಎ 2018*

(ಡಿ.ಕೆ.ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು